ಮಾಡುವವರನ್ನು ಅವರಿಗೆ ಸರ್ಕಾರಿ ನೌಕರರೆಂದು ನೀವು ಟ್ರೀಟ್ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ, 15 ವರ್ಷದಿಂದ ಪುಕ್ಕಟೆ ಇಲ್ಲಿ ದುಡಿಯುತ್ತಿದ್ದಾರೆ. ದೆಹಲಿಯಲ್ಲಿ ಟೋಪಿ ಹಾಕಿಕೊಂಡು ಮಿನಿಸ್ಟರ್ ಮುಂದೆ ಓಡಾಡುತ್ತಾರೆ ಅವರನ್ನು ನೀವು ಪರ್ಮನೆಂಟ್ ಮಾಡುತ್ತೀರಿ? ಪಾಪ ಇವರನ್ನು ಏತಕ್ಕೆ ಸರ್ಕಾರಿ ನೌಕರರೆಂದು ಪರಿಗಣಿಸುವುದಿಲ್ಲ. They are also human beings. ಇವರನ್ನು ಸರ್ಕಾರಿ ನೌಕರರು ಎಂದು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರೆ ಹೇಗೆ?

ಛೇರ್ಮನ್ : ಮಂತ್ರಿಗಳು ಉತ್ತರ ಕೊಟ್ಟಿರಲ್ಲ, ಆಯಿತು. ಈಗ 334ರ ಕಾರ್ಯಕ್ರಮ.

ನಿಯಮ : 334ರ ಮೇರೆಗೆ

ವಿಷಯ : ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಯ ವಿಸ್ತರಣೆ .

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಪ್ರಸಿದ್ಧ ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಯನ್ನು ಸುಮಾರು 70 ವರ್ಷಗಳ ಹಿಂದೆ ಕಟ್ಟಲಾಗಿದ್ದು ಈಗ ಇದನ್ನು ಮೆಡಿಕಲ್ ಆಸ್ಪತ್ರೆಯೆಂದು ಪರಿಗಣಿಸುವುದು ಜೊತೆಗೆ ಇಲ್ಲಿ ನರ್ಸಿಂಗ್ ಟ್ರೈನಿಂಗ್‌ಗೂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇಲ್ಲಿಗೆ ಮಲ್ಲೇಶ್ವರಂ, ರಾಜಾಜಿನಗರ, ಯಶವಂತಪುರ, ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಸಾವಿರಾರು ರೋಗಿಗಳು ದಿನನಿತ್ಯ ಬರುತ್ತಿರುತ್ತಾರೆ. ಇದರಿಂದಾಗಿ ಒಳರೋಗಿಗಳಿಗೆ ಸ್ಥಳಾವಕಾಶವಿಲ್ಲದೆ ತುಂಬಾ ತೊಂದರೆಯಾಗಿರುತ್ತದೆ. ಈ ತೊಂದರೆಯನ್ನು ಆದಷ್ಟು ಬೇಗ ಹೋಗಲಾಡಿಸಲು ಹೊಸ ಕಟ್ಟಡಗಳನ್ನು ಕಟ್ಟಿಸಿ ಹಾಸಿಗೆಗಳ ವ್ಯವಸ್ಥೆ ಮಾಡುವುದರ ಜೊತೆಗೆ ಹೊರ ರೋಗಿಗಳಿಗೋಸ್ಕರ ಐ.ಪಿ.ಪಿ.ಯವರ ಅಧೀನದಲ್ಲಿರತಕ್ಕಂಥ ಕಟ್ಟಡವನ್ನೂ ಕೂಡ ಕೆ. ಸಿ. ಜನರಲ್ ಆಸ್ಪತ್ರೆಯ ಅಧೀನಕ್ಕೊಳಪಡಿಸುವುದರ ಮೂಲಕ ಇಲ್ಲಿಗೆ ದಿನನಿತ್ಯ ಬರತಕ್ಕ ಹೊರ ರೋಗಿಗಳಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಈ ಮೂಲಕ ಮಾನ್ಯ ಆರೋಗ್ಯ ಖಾತೆ ಸಚಿವರನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :(ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ದಿನನಿತ್ಯ ಬರುತ್ತಿರುವ ಹೊರ ರೋಗಿಗಳ ಮತ್ತು ಒಳರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಈ ಎರಡು ವಿಭಾಗದದಲ್ಲಿ ಸ್ಥಳಾವಕಾಶದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಲ್ಲಿಗೆ ದಿನನಿತ್ಯ 1000 ದಿಂದ 1500 ಜನ ಹೊರ ರೋಗಿಗಳು ಹಾಗೂ 80 ರಿಂದ 90 ಜನ ಒಳರೋಗಿಗಳು ದಾಖಲಾಗುತ್ತಿದ್ದಾರೆ. ಈ ಹೆಚ್ಚುತ್ತಿರುವ ಚಿಕಿತ್ಸೆಯ ಬೇಡಿಕೆಯಿಂದಾಗಿ, 1988ರಲ್ಲಿ ಈ ಆಸ್ಪತ್ರೆಯ ಹಾಸಿಗೆಯ ಸಂಖ್ಯೆಯನ್ನು 313ರಿಂದ 453ಕ್ಕೆ ಹೆಚ್ಚಿಸಲಾಯಿತು. ಈಗ ಹಾಲಿ ಇರುವ ಭಾರತೀಯ ಜನಸಂಖ್ಯಾ ಕೇಂದ್ರದ ಕಟ್ಟಡವು ಐಪಿಪಿ -1 ಯೋಜನೆಯಲ್ಲಿ ವಿಶ್ವಬ್ಯಾಂಕಿನ ಹಣಕಾಸಿನ ನೆರವಿನಿಂದ ಕಟ್ಟಿದ್ದು. ಈ ಕಟ್ಟಡವನ್ನು ಬೇರೆ ಉದ್ದೇಶಕ್ಕೆ ವರ್ಗಾಯಿಸಲು ಹಾಗೂ ಇಲ್ಲೇ ಹೊರ ರೋಗಿ ವಿಭಾಗವನ್ನು ತೆರೆಯಲು ಸಾಧ್ಯವಾಗುವುದಿಲ್ಲ.

ಈ ವರ್ಷದ ವೈದ್ಯಕೀಯ ಶಿಕ್ಷಣ ಆಯವ್ಯಯದಲ್ಲಿ ಸುಮಾರು 30 ಕೋಟಿ ರೂಪಾಯಿಗಳ ಹೆಚ್ಚುವರಿ ಹಣ ಒದಗಿಸಲಾಗಿದ್ದು, ಈ ಆಸ್ಪತ್ರೆಗೆ ಪ್ರತ್ಯೇಕ ಹೊರರೋಗಿಗಳ ವಿಭಾಗ ಕಟ್ಟುವುದು ಮತ್ತು ಹಾಸಿಗೆಗಳ ಸಂಖ್ಯೆ ಹೆಚ್ಚು ಮಾಡಲು ಅವಶ್ಯಕ ಕಟ್ಟಡದ ಪ್ಲಾನ್ ಮತ್ತು ಅಂದಾಜು ಪಟ್ಟಿ ತಯಾರಿಸಲು ಇಲಾಖೆಯ ನಿರ್ದೇಶಕರಿಗೆ ತಿಳಿಸಲಾಗುವುದು. ಈ ಬಗ್ಗೆ ಎರಡು ಮೂರು ತಿಂಗಳುಗಳಲ್ಲಿ ಸ್ಪಷ್ಟ ಚಿತ್ರ ತಿಳಿದು ಬರುವುದು.

2) ಆರ್. ಟಿ. ನಗರದ ಸೇಂಟ್‌ಪಾಲ್ ಶಾಲೆಗೆ ಮನ್ನಣೆ .

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಉತ್ತರ ತಾಲ್ಲೂಕಿನ ಆರ್. ಟಿ. ನಗರ ಬಡಾವಣೆಯಲ್ಲಿ ನವೋದಯ ವಿದ್ಯಾ ಸಂಸ್ಥೆಯ ಶಾಲೆಯು 87 ರಲ್ಲಿ ಸೆಂಟ್‌ಪಾಲ್ಸ್ ಇಂಗ್ಲೀಷ್ ಮಿಡಿಯಂ ಶಾಲೆಯಲ್ಲಿ ನಡೆಯುತ್ತಿರುವ ದುರ್ವ್ಯವಹಾರದ ವಿರುದ್ಧ ಪೋಷಕರು ಬಂಡೆದ್ದು ಪೋಷಕರೇ ಶಾಲೆಯನ್ನು ನಡೆಸಿಕೊಂಡು ಬರುತ್ತಿದ್ದು ಸರ್ಕಾರಕ್ಕೆ ತಿಳಿದ ವಿಷಯವಾಗಿರುತ್ತದೆ. ಈ ಶಾಲೆಯು ಪೋಷಕರ ಮಾರ್ಗದರ್ಶನದಲ್ಲಿ ಸಮರ್ಪಕ ಹಾಗೂ ನಿಯಮಾವಳಿಗಳ ಅನುಸಾರವಾಗಿ ನಡೆಯುತಲಿದ್ದು ಮತ್ತು ಈ ಶಾಲೆಯಲ್ಲಿ 600ಕ್ಕೂ ಹೆಚ್ಚು ಮಕ್ಕಳು ಎಲ್.ಕೆ.ಜಿ.ಯಿಂದ 10ನೇ ತರಗತಿಯವರೆಗೂ ಶಾಲೆಗಳು ನಡೆಯುತ್ತಲಿದ್ದು ಈ ಶಾಲೆಗೆ ಮಾನ್ಯತೆ ದೊರಕಿಸಿಕೊಡಲು ಶ್ರೀ ವೀರಪ್ಪಮೊಯಿಲಿಯವರು, ಮಾನ್ಯ ಮುಖ್ಯ ಮಂತ್ರಿಗಳು , ಹಾಗೂ ಶ್ರೀ ಎಸ್. ಎಂ. ಯಾಹ್ಯಾರವರು ಇಂದಿನ ಶಿಕ್ಷಣ ಸಚಿವರು ಶಾಲೆಗೆ ಭೇಟಿ ಕೊಟ್ಟಿದ್ದು ಇದುವರೆಗೂ ಮಾನ್ಯತೆ ನೀಡಿರುವುದಿಲ್ಲ.

ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಿದ್ದು ಕೂಡಲೇ ಮಂತ್ರಿಗಳು ಎಲ್.ಕೆ.ಜಿ.ಯಿಂದ 7ನೇ ತರಗತಿಯವರೆಗೆ ಐಸಿಎಸ್‌ಸಿ ಮಾದರಿಗೆ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೂಡಲೇ ಕೊಡಿಸುವಿರಾ? ಮತ್ತು ಹೈಸ್ಕೂಲ್ ಶಾಲೆಗೆ ಮಾನ್ಯತೆಯನ್ನು ಕೊಡುವಿರಾ? ಎಂದು ಕೇಳುತ್ತೇನೆ.

ಡಾ॥ ಹೆಚ್. ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ನವೋದಯ ವಿದ್ಯಾನಿಕೇತನ ಶಾಲೆ ದಿನ್ನೂರು ಮುಖ್ಯ ರಸ್ತೆ ಆರ್. ಟಿ. ನಗರ, ಬೆಂಗಳೂರು ಈ ಸಂಸ್ಥೆಯು ಕೇಂದ್ರ ಮಾದರಿ ಪಠ್ಯ ಕ್ರಮ ಪದ್ಧತಿ ಅಳವಡಿಸಿಕೊಳ್ಳುವ ಬಗ್ಗೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದು ನ್ಯಾಯಾಲಯವು ದಿನಾಂಕ 20-4-90ರಲ್ಲಿ ನಿಯಮಾನುಸಾರವಾಗಿ ಅರ್ಹತೆ ಮೇಲೆ ಪರಿಶೀಲಿಸುವಂತೆ ಆದೇಶಿಸಿದೆ. ಈ ಶಾಲೆಯು 1 ರಿಂದ 10ನೇ ತರಗತಿಯವರೆಗೆ ಕೇಂದ್ರ ಮಾದರಿ ಪಠ್ಯ ಕ್ರಮ ಪದ್ಧತಿಯಲ್ಲಿ ಅನಧಿಕೃತವಾಗಿ ಶಾಲೆ ನಡೆಸುತ್ತಿದ್ದು ಕೇಂದ್ರ ಮಾದರಿ ಪಠ್ಯ ಕ್ರಮವು ಅಳವಡಿಕೆಗಾಗಿ ಕೋರಿಕೆ ಸಲ್ಲಿಸಿರುತ್ತಾರೆ. ಆದರೆ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆ ಸಲ್ಲಿಸಿರುವುದಿಲ್ಲವೆಂದು ವರದಿಯಾಗಿದೆ. ನಿಯಮದಂತೆ ಅಧಿಕೃತ ಆಂಗ್ಲ ಮಾಧ್ಯಮ ಶಾಲೆಗಳು ರಾಜ್ಯ ಸರ್ಕಾರದ ಮಾನ್ಯತೆ ಪಡೆದು 7ನೇ ತರಗತಿಯವರೆಗೆ ನಡೆಸುತ್ತಿದ್ದಲ್ಲಿ ಮಾತ್ರ ರಾಜ್ಯ ಸರ್ಕಾರದಿಂದ ಕೇಂದ್ರ ಮಾದರಿ ಪಠ್ಯ ಕ್ರಮ ನಡೆಸಲು ಆಕ್ಷೇಪಣೆ ಇಲ್ಲ ಪತ್ರ ಕೋರಲು ಅರ್ಹತೆ ಪಡೆಯುವುದು.

3.15 ಪಿ. ಎಂ.

3.15 ಪಿ. ಎಂ

3) ಹುಬ್ಬಳ್ಳಿ - ಧಾರವಾಡಕ್ಕೆ ಪ್ರತ್ಯೇಕ ಅಗ್ನಿಶಾಮಕ ವ್ಯವಸ್ಥೆ.